# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 741 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.02.2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಾಮಗಾರಿಗಳ ಟೆಂಡರ ಪ್ರಕ್ರಿಯೆಗೆ ಸರ್ಕಾರ ರೂಪಿಸಿರುವ ನೀತಿ ನಿಯಮಗಳೇನು; | ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗುವ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಕಾಯ್ದೆ 1999, ನಿಯಮ–2000, ಇಲಾಖಾಸಂಹಿತೆ-2014 ಮತ್ತು ಸರ್ಕಾರದ ಮಾರ್ಗಸೂಚಿಯಾದ Standard bidding document (Kw1, Kw2, Kw3, Kw4) ರಂತೆ ಹಾಗೂ ಕಾಲಕಾಲಕ್ಕೆ ಸರ್ಕಾರದ ವತಿಯಿಂದ ಹೊರಡಿಸಲಾಗುವ ನಿಯಮ / ಮಾರ್ಗಸೂಚಿಗಳನ್ವಯ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |
| ಆ) | ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಅರ್ಹತೆ ಇದ್ದವರಿಗೆ ಕಾಮಗಾರಿಯನ್ನು ಪ್ರಾರಂಭ ಮಾಡಲು ಕಾರ್ಯಾದೇಶ ನೀಡಲು ಇರುವ ನಿಯಮವೇನು; | ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಅರ್ಹತೆ ಇದ್ದವರ ದರಕಾಸ್ತುಗಳನ್ನು ಮೌಲ್ಯಮಾಪನ ಮಾಡಿ, ಮೊದಲ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪ್ರಾರಂಭ ಮಾಡಲು ಕಾರ್ಯಾದೇಶ ನೀಡುವ ಪೂರ್ವದಲ್ಲಿ letter of acceptance ನೀಡಿ, ನಿಗಧಿಪಡಿಸಲಾಗುವ security deposit ಪಾವತಿಸಿದ ನಂತರ ಕಾರ್ಯಾದೇಶ ನೀಡಲಾಗುವುದು. |
| ಇ) | ಈಗಾಗಲೇ ಹಲವಾರು ಕಾಮಗಾರಿಗಳಿಗೆ ಕರೆದಿರುವ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಅರ್ಹರಿದ್ದರೂ ಸಹ ಕಾಮಗಾರಿಯನ್ನು ಮಾಡಲು ಕಾರ್ಯಾದೇಶವನ್ನು ನೀಡದಿರುವ ಕಾಮಗಾರಿಗಳ ವಿವರಗಳನ್ನು ಒದಗಿಸುವುದು; ಕೋಲಾರ ಜಿಲ್ಲೆಯಲ್ಲಿ ಇಂತಹ ಎಷ್ಟು ಪ್ರಕರಣಗಳಿವೆ; | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಹಾಗೂ ಕೋಲಾರ ಜಿಲ್ಲೆಯಲ್ಲಿ ಕಾಮಗಾರಿಗಳ ಆರ್ಥಿಕ ಬಿಡ್ ಅನುಮೋದನೆಯಾದ ನಂತರ ಕಾರ್ಯಾದೇಶ ನೀಡದಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಈ) | ಕಾರ್ಯಾದೇಶ ನೀಡುವ ಸಂಬಂಧವಾಗಿ ಸರ್ಕಾರಕ್ಕೆ ಕಳೆದ ಮೂರು ವರ್ಷದಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ; ಅವುಗಳಿಗೆ ಕಾಲಮಿತಿಯೊಳಗೆ ಅನುಮೋದನೆ ನೀಡಲಾಗಿದೆಯೇ; ಅಥವಾ ತಡವಾಗಿದ್ದಲ್ಲಿ ಕಾರಣವೇನು: | ಕಳೆದ ಮೂರು ವರ್ಷದಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯಾದೇಶ ನೀಡಲಾಗಿರುವ ವಲಯವಾರು ವಿವರಗಳು ಈ ಕೆಳಗಿನಂತಿದೆ: |

| ವಲಯ | ಕಾರ್ಯಾದೇಶ ನೀಡಿದ ಕಾಮಗಾರಿಗಳ ಸಂಖ್ಯೆ |
|---|---|
| ದಕ್ಷಿಣ | 16476 |
| ಉತ್ತರ | 17618 |
| ಈಶಾನ್ಯ | 17662 |

| | ಪ್ರಶ್ನೆಗಳು | ಉತ್ತರಗಳು |
|---|---|---|
| | | ಕೇಂದ್ರ: 15249<br>SHDP: 176 (ಪ್ಯಾಕೇಜ್‌ಗಳು)<br>PRAMC: 447<br>KRDCL: 40<br><br>ಕಳೆದ ಮೂರು ವರ್ಷಗಳಿಂದ ಇಲಾಖೆಯಲ್ಲಿ ಒಟ್ಟು 67668 ಕಾಮಗಾರಿಗಳಿಗೆ ಕಾಲಮಿತಿಯೊಳಗೆ ಕಾರ್ಯಾದೇಶ ನೀಡಲಾಗಿರುತ್ತದೆ. |
| ಉ) | ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಿ, ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಸರಿ ಇದ್ದರೂ ಸಹ, ಇವರುಗಳನ್ನು ಬಿಟ್ಟು ಬೇರೆ ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಳ್ಳಲು ಸರ್ಕಾರದ ನಿಯಮದಲ್ಲಿ ಅವಕಾಶ ಇದೆಯೇ? | ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಅರ್ಹರಾಗುವ ಗುತ್ತಿಗೆದಾರರನ್ನು ಮಾತ್ರ ಆಯ್ಕೆ ಮಾಡಲು ಅವಕಾಶವಿರುತ್ತದೆ. |

ಲೋಇ 15 ಸಿಕ್ಯೂಎನ್ 2023(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು